ಕರ್ನಾಟಕ ಸರ್ಕಾರ
ಕೈಮಗ್ಗ ಮತ್ತು ಜವಳಿ ಇಲಾಖೆ
ಜಿಲ್ಲಾ ಪಂಚಾಯತ್, ಬೆಂಗಳೂರು ಗ್ರಾಮಾಂತರ

ಉಪ ನಿರ್ದೇಶಕರ ಕಛೇರಿ,
ಗಾರ್ಮೆಂಟ್ಸ್ ತರಬೇತಿ ಕೇಂದ್ರದ ಕಟ್ಟಡ,
ಕೆಐಎಡಿಬಿ ಅಪೇರಲ್ ಪಾರ್ಕ್,
ದೊಡ್ಡಬಳ್ಳಾಪುರ-561203

ಇ-ಮೇಲ್ :ddtexbr@yahoo.com
ಕಛೇರಿದೂರವಾಣಿ: 080-22860495

ಸಂಖ್ಯೆ:ಕೈಜಇ/ಬೆಂಗ್ರಾಜಿಪಂ/ವಿ.ಸ.ಧನ-94/ಜತ/2025-26/284 ದಿನಾಂಕ: 15.11.2025

ರವರಿಗೆ,
ಅಧೀಕ್ಷಕ ಅಭಿಯಂತರರು (ವಿ)
ವಾಣಿಜ್ಯ ಕಾರ್ಯ ಮತ್ತು ಪಾಲನೆ,
ಬೆ.ವಿ.ಕಂ,ಬೆಂಗಳೂರು ಗ್ರಾಮೀಣ ವೃತ್ತ,
ಹೆಬ್ಬಾಳ, ಬೆಂಗಳೂರು

ಮಾನ್ಯರೆ,

ವಿಷಯ:- ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯಡಿ 20 ಹೆಚ್.ಪಿ. ವರೆಗೆ ವಿದ್ಯುತ್ ಸಂಪರ್ಕ ಹೊಂದಿರುವ ವಿದ್ಯುತ್ ಚಾಲಿತ ಮಗ್ಗಗಳ ಘಟಕಗಳಿಗೆ ರಿಯಾಯಿತಿ ದರದಲ್ಲಿ 94 ನೇ ತಂಡ ಘಟಕಗಳಿಗೆ ವಿದ್ಯುತ್ ಸಹಾಯಧನ ಒದಗಿಸಲು ಪ್ರಸ್ತಾವನೆ ಸಲ್ಲಿಸುವ ಕುರಿತು.

ಉಲ್ಲೇಖ:- ಸರ್ಕಾರದ ಆದೇಶ ಸಂಖ್ಯೆ: ಸಿಐ 37ಜಕೈಯೋ 2023 ಬೆಂಗಳೂರು ದಿನಾಂಕ:20.10.2023

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದ ಸರ್ಕಾರಿ ಆದೇಶದಲ್ಲಿ 10 ಹೆಚ್ ಪಿ ವರೆಗಿನ ವಿದ್ಯುತ್ ಸಂಪರ್ಕ ಹೊಂದಿರುವ ವಿದ್ಯುತ್ ಮಗ್ಗ ಮತ್ತು ಮಗ್ಗ ಪೂರ್ವ ಘಟಕಗಳಿಗೆ ಉಚಿತ ವಿದ್ಯುತ್ ಹಾಗೂ 10 ರಿಂದ 20 ಹೆಚ್ ಪಿ ವರೆಗಿನ ಮಾಸಿಕ ಗರಿಷ್ಠ 500 ಯೂನಿಟ್‌ಗಳ ಉಚಿತ ವಿದ್ಯುತ್ ಒದಗಿಸುವ ಮೂಲಕ ನೇಕಾರರನ್ನು ಆರ್ಥಿಕ ಸ್ವಾವಲಂಬಿಗಳನ್ನಾಗಿಸಲು ಯೋಜನೆಯ ಮಾರ್ಗಸೂಚಿಯನ್ನು ಹೊರಡಿಸಲಾಗಿರುತ್ತದೆ.

ಆದುದರಿಂದ ಈವರೆಗೆ ಬಂದಿರುವ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವಿದ್ಯುತ್ ಮಗ್ಗ ಘಟಕ/ಮಗ್ಗ ಪೂರ್ವ ಘಟಕಗಳ ಪ್ರಸ್ತಾವನೆಗಳನ್ನು ಅನುಮೋದಿಸಿ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.

| ಕ್ರ ಸಂ | ತಾಲ್ಲೂಕು | ಘಟಕಗಳ ಸಂಖ್ಯೆ | ವಿದ್ಯುತ್ ಮಗ್ಗಗಳ ಸಂಖ್ಯೆ / ಮಗ್ಗಪೂರ್ವ | ಅಶ್ವಶಕ್ತಿ (ಹೆಚ್.ಪಿ) |
|---|---|---|---|---|
| 1 | ದೊಡ್ಡಬಳ್ಳಾಪುರ | 58 | 206 | 220 |
| 2 | ದೇವನಹಳ್ಳಿ | 7 | 18 | 31 |
| | ಒಟ್ಟು | 65 | 224 | 251 |

ಆದ ಕಾರಣ ನೇಕಾರರು ವಿದ್ಯುತ್ ಮಗ್ಗದಲ್ಲಿ ನೇಯ್ಗೆ ಚಟುವಟಿಕೆಯನ್ನು ನಡೆಸಲು ಅನುವಾಗುವಂತೆ 10 ಹೆಚ್ ಪಿ ವರೆಗಿನ ವಿದ್ಯುತ್ ಸಂಪರ್ಕ ಹೊಂದಿರುವ ವಿದ್ಯುತ್ ಮಗ್ಗ ಮತ್ತು ಮಗ್ಗ ಪೂರ್ವ ಘಟಕಗಳಿಗೆ ಉಚಿತ ವಿದ್ಯುತ್ ನೀಡಲು ಕೋರಲಾಗಿದೆ. ನಿಗದಿತ ನಮೂನೆಯಲ್ಲಿ ಮಾಹಿತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿದೆ.

ತಮ್ಮ ವಿಶ್ವಾಸಿ,

ಉಪ ನಿರ್ದೇಶಕರು
ಕೈಮಗ್ಗ ಮತ್ತು ಜವಳಿ

ಪ್ರತಿಯನ್ನು

1. ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಬೆಂಗಳೂರು
2. ಜಂಟಿ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ, ದಕ್ಷಿಣ ವಲಯ/ವಿಭಾಗ, ಬೆಂಗಳೂರು.
3. ಕಛೇರಿ ಪ್ರತಿ.

# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ಕಂಪನಿ ಗುರುತಿನ ಸಂಖ್ಯೆ(ಸಿ.ಐ.ಎನ್) : ಯು04010ಕೆಎ2002ಎಸ್‌ಜಿಸಿ030438


ಸಂಖ್ಯೆ: ಅಇಂ(ವಿ)/ಬೆಂಗ್ರಾವೃ/ಉಲೆನಿ/ಲೆ/ಸಲೆ/ಹಿಸ-2/2025-26 7099-103

ಲಗತ್ತು :


ಅಧೀಕ್ಷಕ ಇಂಜಿನಿಯರ್(ವಿ)ರವರ ಕಛೇರಿ,
ವಾಣಿಜ್ಯ ಕಾರ್ಯ ಮತ್ತು ಪಾಲನೆ,
ಬೆ.ವಿ.ಕಂ. ಬೆಂಗಳೂರು ಗ್ರಾಮೀಣ ವೃತ್ತ,
"ಬೀಜ ಭವನ", 5ನೇ ಮಹಡಿ,
ಬಳ್ಳಾರಿ ರಸ್ತೆ, ಹೆಬ್ಬಾಳ, ಬೆಂಗಳೂರು-24.
Email ID : sebrc@bescom.co.in
ದೂರವಾಣಿ ಸಂಖ್ಯೆ: 080 – 28482437


ದಿನಾಂಕ : 16 DEC 2025

ರವರಿಗೆ,

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಕಾರ್ಯ ಮತ್ತು ಪಾಲನಾ ದೊಡ್ಡಬಳ್ಳಾಪುರ ನಗರ ಮತ್ತು
ದೇವನಹಳ್ಳಿ ಉಪ ವಿಭಾಗ, ಬೆ.ವಿ.ಕಂ.,

ಮಾನ್ಯರೇ,

**ವಿಷಯ:** ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯಡಿ 20 ಹೆಚ್.ಪಿ. ವರೆಗೆ ವಿದ್ಯುತ್ ಸಂಪರ್ಕ ಹೊಂದಿರುವ ವಿದ್ಯುತ್ ಚಾಲಿತ ಮಗ್ಗಗಳ ಘಟಕಗಳಿಗೆ ರಿಯಾಯಿತಿ ದರದಲ್ಲಿ 94ನೇ ತಂಡ ಘಟಕಗಳಿಗೆ ವಿದ್ಯುತ್ ಸಹಾಯಧನ ಒದಗಿಸಲು ಪ್ರಸ್ತಾವನೆ ಸಲ್ಲಿಸಿರುವ ಬಗ್ಗೆ.

**ಉಲ್ಲೇಖ:**
1. ಸರ್ಕಾರಿ ಆದೇಶ ಸಂಖ್ಯೆ: ಸಿಐ 37/ಜಕೈಯೋ/2023 ಬೆಂಗಳೂರು ದಿನಾಂಕ: 20.10.2023.
2. ಉಪ ನಿರ್ದೇಶಕರು, ಬೆಂಗಳೂರು ಗ್ರಾಮಾಂತರ, ಕೈಮಗ್ಗ ಮತ್ತು ಜವಳಿ ಇಲಾಖೆರವರ ಪತ್ರ ಸಂಖ್ಯೆ:ಕೈಜಇ/ಬೆಂಗ್ರಾಜಿಪಂ/ವಿ.ಸ.ಧನ-94/ಜತ/2025-26/284 ದಿನಾಂಕ:15.11.2025.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕೈಮಗ್ಗ ಮತ್ತು ಜವಳಿ ಇಲಾಖಾ ವತಿಯಿಂದ ವಿದ್ಯುತ್ ಮಗ್ಗ, ಮಗ್ಗ ಪೂರ್ವ ಚಟುವಟಿಕೆಗಳಲ್ಲಿ ತೊಡಗಿರುವ ನೇಕಾರರಿಗೆ ಉಚಿತ ವಿದ್ಯುತ್ ಒದಗಿಸುವಂತೆ ಉಲ್ಲೇಖ(1)ರ ಸರ್ಕಾರದ ಆದೇಶ ಹಾಗೂ 94ನೇ ತಂಡದ 65 ಘಟಕಗಳಿಗೆ ನೇಕಾರರ ವಿಶೇಷ ಯೋಜನೆಯಡಿ ರಿಯಾಯಿತಿ ದರದಲ್ಲಿ ವಿದ್ಯುತ್ ಸಹಾಯಧನವನ್ನು ಒದಗಿಸುವಂತೆ ಉಪ ನಿರ್ದೇಶಕರು, ಬೆಂಗಳೂರು ಗ್ರಾಮಾಂತರ, ಕೈಮಗ್ಗ ಮತ್ತು ಜವಳಿ ಇಲಾಖೆರವರು ಉಲ್ಲೇಖ(2)ರಲ್ಲಿ ಈ ಕಛೇರಿಗೆ ಕೋರಿರುತ್ತಾರೆ ಮತ್ತು ಪತ್ರವನ್ನು ಲಗತ್ತಿಸಲಾಗಿದೆ.

ಅದರನ್ವಯ, 65 ಘಟಕಗಳಿಗೆ ರಿಯಾಯಿತಿ ನೀಡಿ, ವಿದ್ಯುತ್ ಸಹಾಯ ಧನವನ್ನು ಪಡೆಯುವುದು ಮತ್ತು ಸದರಿ ಮಾಹಿತಿಯನ್ನು ಉಪ ನಿರ್ದೇಶಕರು, ಬೆಂಗಳೂರು ಗ್ರಾಮಾಂತರ, ಕೈಮಗ್ಗ ಮತ್ತು ಜವಳಿ ಇಲಾಖೆ, ಬೆಂಗಳೂರು ಗ್ರಾಮಾಂತರರವರಿಗೆ ಒದಗಿಸಿ, ಪ್ರತಿಯನ್ನು ಈ ಕಛೇರಿಗೆ ಸಲ್ಲಿಸಲು ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ,

(ಬಸವಣ್ಣ ಸಿ.),
ಅಧೀಕ್ಷಕ ಇಂಜಿನಿಯರ್(ವಿ),
ಬೆಂಗಳೂರು ಗ್ರಾಮೀಣ ವೃತ್ತ, ಬೆ.ವಿ.ಕಂ.